**ಸಾಕ್ಷಿಗೆ ದಿನಾಂಕ *03-05-2024* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : *3* ಮತ್ತು *4* ನೇ ಪ್ರತಿವಾದಿಯರ ಪರ ಶ್ರೀ ಬಿ ಎನ್ ಎಮ್. ವಕೀಲರಿಂದಃ**

ನನ್ನ ತಂದೆಯ ಹೆಸರು ದ್ಯಾವಪ್ಪ . ನನ್ನ ತಂದೆ ಮತ್ತು ತಾಯಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು. ಅವರೆಂದರೆ, ಯಮನಪ್ಪ, ಶಿವಶಂಕ್ರಪ್ಪ, ತಾರಾಬಾಯಿ ಮತ್ತು ಸಿದ್ರಾಮಪ್ಪ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ. ಸರ್ವೆ ನಂ. 107/3 ಕ್ಷೇತ್ರ 4 ಎಕರೆ 9 ಗುಂಟೆ ಇದು ನನ್ನ ತಂದೆಗೆ ಸರಕಾರದಿಂದ ಇನಾಮ್ ರೂಪದಲ್ಲಿ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 107/3 ನ್ನು ಬಿಟ್ಟು ಉಳಿದ ಎಲ್ಲ ಜಮೀನುಗಳು ಪಿತ್ರಾರ್ಜಿತ ಆಗಿ ಬಂದಿರುತ್ತವೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ವಾರಸಾ ನಾತೆಯಿಂದ ಕೇವಲ ಗಂಡು ಮಕ್ಕಳ ಹೆಸರು ಮಾತ್ರ ಬಂದಿರುತ್ತದೆ ಎಂದರೆ ಸರಿ. ವಾರಸಾ ಮಾಡಿಕೊಳ್ಳುವ ಸಮಯದಲ್ಲಿ 7 ನೇ ಪ್ರತಿವಾದಿಗೆ 10 ತೊಲೆ ಬಂಗಾರ ಮತ್ತು ಕಟಗೂರ ಗ್ರಾಮದಲ್ಲಿರುವ ಜಮೀನು ಸರ್ವೆ ನಂ.56/2 ನ್ನು ಖರೀದಿ ಹಿಡಿಯಲು ಹಣ ಕೊಟ್ಟಿರುತ್ತೇವೆ. 7 ನೇ ಪ್ರತಿವಾದಿಗೆ ಬಂಗಾರ ಮತ್ತು ಹಣವನ್ನು ಕೊಟ್ಟಿದ್ದರಿಂದ ಅವರು ನಮ್ಮ ಮೂರು ಜನ ಸಹೋದರರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ವಾರಸಾ ನಂತರ ನಾವು 3 ಜನ ಸಹೋದರರು ಪಾಲುವಾಟ್ನಿ ಮಾಡಿಕೊಂಡಿರುವುದಿಲ್ಲ. ಯಮನಪ್ಪ ಮತ್ತು ಶಿವಶಂಕ್ರಪ್ಪ ರವರು ಮೃತರಾಗಿರುತ್ತಾರೆ. ಯಮನಪ್ಪ ರವರ ವಾರಸುದಾರರಾಗಿ 1 ಮತ್ತು 2 ನೇ ಪ್ರತಿವಾದಿಯರು ಇದ್ದು ಮತ್ತು ಶಿವಶಂಕ್ರಪ್ಪ ರವರ ವಾರಸುದಾರರಾಗಿ 3 ಮತ್ತು 4 ನೇ ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರಿಗೆ ಜಂಟೀಯಾಗಿ ಎಲ್ಲ ದಾವಾ ಆಸ್ತಿಗಳಲ್ಲಿ ¾ ಹಿಸ್ಸಾ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.